**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 20544/2017 ಚಾಸಾಃ 12 ಪ್ರಾಸಾಃ 8**

**ಸಾಕ್ಷಿಯನ್ನು ದಿಃ 25.11.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ.ಜಿ.ಜಿ.ಜಿ. ವಕೀಲರಿಂದಃ**

ಪ್ರಥಮ ವರ್ತಮಾನ ವರದಿಯಲ್ಲಿ ನಾನು 1ನೇ ಆರೋಪಿ ಎಂದರೆ ಸರಿ. ನಾನು ಈ ಪ್ರಕರಣ ನಡೆದಾಗ ಶ್ರೀ ಬನಶಂಕರಿ ದೇವಸ್ಥಾನದ ಪ್ರಧಾನ ಅರ್ಚಕರಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದೆನು ಎಂದರೆ ಸರಿ. ನಾನು ದೇವಸ್ಥಾನದ ಪ್ರಧಾನ ಅರ್ಚಕರಾಗಿರುವ ಕಾರಣ ಚಿನ್ನದ ಕಿರೀಟ, ಪಾದುಕೆ ಮತ್ತು ಇತರೆ ಆಭರಣಗಳನ್ನು ನನ್ನ ವಶದಲ್ಲಿ ಇಟ್ಟುಕೊಳ್ಳಬೇಕು ಎಂದರೆ ಸರಿ. ವಿಶೇಷ ಪೂಜೆಗಳಿದ್ದಾಗ ಬಂಗಾರದ ಆಭರಣಗಳನ್ನು ತೆಗೆದುಕೊಂಡು ದೇವಿಗೆ ಅಲಂಕಾರ ಮಾಡುತ್ತೇವೆ, ನಂತರ ಅದನ್ನು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಾಪಸ್ಸು ಮಾಡುತ್ತೇವೆ. ಕಾರ್ಯನಿರ್ವಹಕ ಅಧಿಕಾರಿಗಳು ರಿಜಿಸ್ಟರ್ ಅನ್ನು ಇಟ್ಟಿದ್ದು ಅದರಲ್ಲಿ ಸಹಿ ಮಾಡಿ ಆಭರಣಗಳನ್ನು ತೆಗೆದುಕೊಳ್ಳುತ್ತೇವೆ.

ಸ್ವೀಕರಿಸಿದ ಬಂಗಾರದ ಆಭರಣಗಳನ್ನು ಮರಳಿಸುವ ಸಂದರ್ಭದಲ್ಲಿ ನಾನು ಪ್ರಧಾನ ಅರ್ಚಕನಾಗಿ ಜವಬ್ದಾರಿಯಿಂದ ಮರಳಿಸಬೇಕು ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವ ದಿನಾಂಕದಂದು ಆಭರಣಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪಡೆದಿದ್ದೇವು ಎಂದು ನೆನಪಿರುವುದಿಲ್ಲ. ದೇವಿಗೆ ಅಲಂಕಾರ ಮಾಡಿದ ಆಭರಣಗಳನ್ನು ವಿಶೇಷ ಪೂಜೆ ಮುಗಿದ ನಂತರ ವಾಪಸ್ಸು ಮಾಡುತ್ತೇವೆ. ಇಂತಿಷ್ಟು ದಿನ ಎಂದು ನಿಗದಿ ಇರುವುದಿಲ್ಲ. ಕಾರ್ಯನಿರ್ವಹಕ ಅಧಿಕಾರಿಗಳು ಸಹ ಬಂಗಾರದ ಆಭರಣಗಳನ್ನು ನೀಡುವಾಗ ಮತ್ತು ಸ್ವೀಕರಿಸುವಾಗ ಜವಬ್ದಾರಿಯಿಂದ ಅವುಗಳನ್ನು ಪರಿಶೀಲಿಸಬೇಕು ಎಂದರೆ ಸರಿ. ಘಟನೆ ನಡೆಯುವ ಎಷ್ಟು ದಿನದ ಹಿಂದೆ ಆಭರಣಗಳನ್ನು ಪಡೆದಿದ್ದೇವು ಎಂದು ಗೊತ್ತಿರುವುದಿಲ್ಲ. 2015ರ ಜನವರಿಯಲ್ಲಿ ದೇವಿ ಅಲಂಕಾರದ ಆಭರಣಗಳನ್ನು ತೆಗೆದುಕೊಂಡಿದ್ದೆವು, ಅದನ್ನು ವಾಪಸ್ಸು ಮಾಡಲು ಪ್ರಯತ್ನ

ಮಾಡಿದರು ಕಾರ್ಯನಿರ್ವಾಹಕ ಅಧಿಕಾರಿಗಳು ಸ್ವೀಕರಿಸದ ಕಾರಣ ಅದನ್ನು ದೇವಸ್ಥಾನದಲ್ಲಿಯೇ ಅಲಮೇರಾದಲ್ಲಿ ಇಟ್ಟಿದ್ದೆವು. ಸದರಿ ಅಲಮೇರಾ/ ಬೀರುವಿನ ಕೀ ಗರ್ಭಗುಡಿಯಲ್ಲಿಯೇ ಇಡಲಾಗಿರುತ್ತದೆ.

ನಾನು ಕಾರ್ಯನಿರ್ವಾಹಕ ಅಧಿಕಾರಿಗಳು ಆಭರಣಗಳನ್ನು ಸ್ವೀಕರಿಸುತ್ತಿಲ್ಲವೆಂದು ಅವರ ಮೇಲಾಧಿಕಾರಿಗಳಿಗೆ ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ. ದೇವಿಗೆ ಆಭರಣಗಳನ್ನು ಹಾಕಿ ಅಲಂಕಾರ ಮಾಡುವ ಪೂರ್ವದಲ್ಲಿ ಈ ಸಂಬಂಧ ನನ್ನ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮತಿಯನ್ನು ಉಳಿದ ಅರ್ಚಕರು ಪಡೆಯಬೇಕು ಎಂದರೆ ಸರಿ. 2ನೇ ಆರೋಪಿ ನಾಗರಾಜ್ ರಾವ್ ರವರು ದೇವಿಗೆ ಆಭರಣಗಳನ್ನು ತೊಡಿಸಬೇಕು ಎಂದು ಅನುಮತಿ ನೀಡುವಂತೆ ನನಗೆ ಕೋರಿರುವುದಿಲ್ಲ. ಘಟನೆ ನಡೆದ ದಿನ ನನಗೆ ಆರೋಗ್ಯ ಸರಿಯಿಲ್ಲದ ಕಾರಣ ಉಳಿದ ಅರ್ಚಕರಿಗೆ ತಿಳಿಸಿ ಅವರ ಅನುಮತಿ ಪಡೆದು ಆಸ್ಪತ್ರೆಗೆ ಹೋಗಿದ್ದರು. ನಾನು ಹುಷಾರಿಲ್ಲವೆಂದು ಪೊಲೀಸರಿಗೆ ತಿಳಿಸಿರುತ್ತೇನೆ, ಅದರ ವಿವರಗಳನ್ನು ತಿಳಿಸಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನಗೆ ವೈಯಕ್ತಿಕ ಮಾಹಿತಿಯಿಲ್ಲ ಎಂದರೆ ಸರಿ. ಚಿನ್ನದ ಪಾದುಕೆ ಮತ್ತು ಕಿರೀಟ ಭಿನ್ನವಾಗಲು ಕಾರಣ ಏನು ಎಂಬುದು ನನಗೆ ಗೊತ್ತಿಲ್ಲ. ಆಭರಣ ಯಾವ ರೀತಿ ಕಳುವಾಯಿತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನಗೆ ಈ ಪ್ರಕರಣದ ಸಂಬಂಧ ಯಾವುದೇ ಮಾಹಿತಿ ಇರುವುದಿಲ್ಲ.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ. ವಕೀಲರಿಂದಃ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು 1ನೇ ಆರೋಪಿ ಪರ ವಕೀಲರು ಕೋರಿದ್ದು ಅನುಮತಿ ನೀಡಲಾಗಿರುತ್ತದೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**